ವಿಜಯವಾಣಿ
ಕನ್ನಡಿಗರ ಧ್ವನಿ

# ಜೈನ್ ವಿಶ್ವವಿದ್ಯಾಲಯ ಕ್ರೀಡಾ ಸಾಧಕರಿಗೆ ಸನ್ಮಾನ

**ಬೆಂಗಳೂರು:** ಅಖಿಲ ಭಾರತ ವಿಶ್ವವಿದ್ಯಾಲಯ ಸೇರಿದಂತೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ 2013-14 ಮತ್ತು 2014-15ನೇ ಸಾಲಿನಲ್ಲಿ ಸಾಧನೆಗೈದ ಜೈನ್ ವಿಶ್ವವಿದ್ಯಾಲಯದ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು.

ವಿವಿ ಪುರಂನ ಎಸ್‌ಬಿಎಂ ಜೈನ್ ಕಾಲೇಜು ಆವರಣದಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಜೈನ್ ವಿವಿ ಸಂಸ್ಥೆ ಚೇರ್ಮನ್ ಚೆನ್ನರಾಜ್ ರಾಯ್ ಚಂದ್, ಸನ್ಮಾನಿತರಿಗೆ ನಗದು ಬಹುಮಾನ ನೀಡಿ ಗೌರವಿಸಿದರು. ಇದೆ ವೇಳೆ ಮಾತನಾಡಿದ ಅವರು, 'ಕ್ರೀಡೆಗೆ ಜೈನ್ ವಿವಿ ಮೊದಲ ಆದ್ಯತೆ ನೀಡಿದ್ದು, ಮುಂದಿನ 2-3 ವರ್ಷದೊಳಗೆ 200 ಕೋಟಿ ರೂಪಾಯಿ ವೆಚ್ಚದಲ್ಲಿ ಕನಕಪುರ ರಸ್ತೆಯಲ್ಲಿರುವ ಜೈನ್ ಗ್ಲೋಬಲ್ ಕ್ಯಾಂಪಸ್‌ನಲ್ಲಿ ಕ್ರೀಡಾ ಅಕಾಡೆಮಿ ಸ್ಥಾಪಿಸಲಾಗುತ್ತಿದೆ' ಎಂದರು. ಜೈನ್ ವಿವಿ ವಿದ್ಯಾರ್ಥಿಗಳು ಒಲಿಂಪಿಕ್ಸ್‌ನಂತಹ ಕ್ರೀಡಾಕೂಟಗಳಲ್ಲಿ ಭಾರತಕ್ಕೆ ಪದಕ ತಂದುಕೊಡುವಂತೆ ತರಬೇತಿ ನೀಡುವುದೇ ವಿಶ್ವವಿದ್ಯಾಲಯದ ಗುರಿ ಎಂದರು.




ಜೈನ್ ವಿವಿ ಚೇರ್ಮನ್ ಚೆನ್ನರಾಜ್ ಜತೆ ಕ್ರೀಡಾ ಸಾಧಕರು.

ಅಖಿಲ ಭಾರತ ವಿಶ್ವವಿದ್ಯಾಲಯ ಮಟ್ಟದಲ್ಲಿ ಪದಕ ಗೆದ್ದಿದ್ದ ವಿವಿ ವಿದ್ಯಾರ್ಥಿಗಳಾದ ಈಜುಪಟುಗಳಾದ ಪೂರ್ವ ಕಿರಣ್ ಶೆಟ್ಟಿ, ಮೀನಾಕ್ಷಿ ವಿಕೆಆರ್, ರಕ್ಷಿತ್ ಶೆಟ್ಟಿ, ಟೆಕ್ವೊಂಡೊದಲ್ಲಿ ಕಂಚಿನ ಪದಕ ವಿಜೇತೆ ರೂಪಾ ಎಸ್ ಸೇರಿದಂತೆ ಪದಕ ವಿಜೇತ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು. ಜತೆಗೆ ರಣಜಿ ಟ್ರೋಫಿಯಲ್ಲಿ ಕರ್ನಾಟಕ ಪ್ರತಿನಿಧಿಸಿದ ಶ್ರೇಯಸ್ ಗೋಪಾಲ್ ಹಾಗೂ ಜೆ.ಸುಚಿತ್‌ರನ್ನು ಇದೇ ವೇಳೆ ಅಭಿನಂದಿಸಲಾಯಿತು. ಕ್ರೀಡಾಪಟುಗಳ ಪೈಕಿ ಪೂರ್ವ ಕಿರಣ್‌ಶೆಟ್ಟಿ 1.60 ಲಕ್ಷ ರೂ. ಹಾಗೂ ಮೀನಾಕ್ಷಿ ವಿಕೆಆರ್ 80 ಸಾವಿರ ನಗದು ಬಹುಮಾನ ಪಡೆದರು.